ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಮಂಗಳೂರು ವಿಶ್ವವಿದ್ಯಾನಿಲಯದ ಪೀಠಗಳ ಬಗ್ಗೆ

1232 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಪೀಠ, ತುಳು ಪೀಠ, ಜಾನಪದ ಪೀಠಗಳು ಇವೆಯೇ?*

ಆ) *ಇದಲ್ಲದೆ ಬೇರೆ ಯಾವ ಯಾವ ಪೀಠಗಳಿವೆ?*

ಇ) *ಇಲ್ಲಿ ಇಸ್ಲಾಂ ಪೀಠ ಇದೆಯೇ?*

ಈ) *ಇಲ್ಲವಾದರೆ ಏಕೆ ಸ್ಥಾಪನೆ ಮಾಡಲು ಯೋಚಿಸಿಲ್ಲ?*

ಉ) *ಈಗ ಇರುವ ಪೀಠಗಳಿಗೆ ಸರಕಾರ ಹಣದ ನೆರವು ನೀಡಿದೆಯೇ?*

ಊ) *ಯಾವ ಪೀಠಕ್ಕೆ ಎಷ್ಟೆಷ್ಟು?*

ಶ್ರೀ ಎಂ. ವೀರಪ್ಪ ಮೊಯಿಲಿ(ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಈ ಕೆಳಗೆ ನಮೂದಿಸಿರುವ ಪೀಠಗಳಿವೆ.

1) ಭಾರತೀಯ ಸ್ಟೇಟ್ ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ಪೀಠ.

2) ಧರ್ಮನಿಧಿಯೋಗ ಪೀಠ.

3) ಎಂ.ವಿ.ಶಾಸ್ತ್ರಿ ಸ್ಮಾರಕ ಆಯುರ್ವೇದ ಮತ್ತು ಸಂಸ್ಕೃತ ಪೀಠ.

4) ಕೆನರಾ ಬ್ಯಾಂಕಿನ ಮೇನೇಜ್‌ಮೆಂಟ್ ಕೋರ್ಸಿನ ಪೀಠ.

5) ಸಿಂಡಿಕೇಟ್ ಬ್ಯಾಂಕಿನ ರೂರಲ್ ಬ್ಯಾಂಕಿಂಗ್ ಪೀಠ.

6) ವಿಜಯಾ ಬ್ಯಾಂಕಿನ ಪರಿಸರ ಸಂರಕ್ಷಣಾ ಪೀಠ.

7) ಮಂಗಳೂರು ಡಯೊಸೆಸ್‌ನ ಕ್ರಿಶ್ಚಿಯಾನಿಟಿ ಪೀಠ.

ಇ) ಇಲ್ಲ.

ಈ) ಈ ವಿಷಯದಲ್ಲಿ ಯಾವ ಪ್ರಸ್ತಾವನೆಯು ಬಂದಿರುವುದಿಲ್ಲ.

ಉ) ಎಂ. ವಿ. ಶಾಸ್ತ್ರಿ ಸ್ಮಾರಕ ಆಯುರ್ವೇದ ಮತ್ತು ಸಂಸ್ಕೃತ ಪೀಠಕ್ಕೆ ಸರಕಾರ ರೂ. 2 ಲಕ್ಷಗಳ ನೆರವು ನೀಡಿದೆ.

ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಬಗ್ಗೆ

293 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ವಿಶೇಷ ತಪಾಸಣೆ ಅಂದರೆ ಸಿ.ಟಿ.ಸ್ಕಾನಿಂಗ್ ಲೇನಿಯರ್ ಆಕ್ಸಿಲರೇಟರ್ ಪರಮಾಣು ವೈದ್ಯಕೀಯ ತಪಾಸಣೆ ಮತ್ತು ಮೆಮೋಗ್ರಫಿ ಮುಂತಾದ ವಿಷಯಗಳಿಗೆ ಮಾಡುತ್ತಿರುವ ದರಗಳು ಯಾವುವು?*

ಆ) *ಮೇಲೆ ನಿಗದಿಪಡಿಸಿರುವ ದರಗಳು ಎಲ್ಲಾ ಹಂತದ ಆದಾಯದ ವರ್ಗದ ರೋಗಿಗಳಿಗೆ ಅನ್ವಯವಾಗುತ್ತದೆಯೇ?*

ಇ) ಬಡ ಮತ್ತು ಮದ್ಯಮ ವರ್ಗದ ರೋಗಿಗಳಿಗೆ ಮೇಲಿನ ದರದಿಂದ ರಿಯಾಯಿತಿ ಅಥವಾ ಉಚಿತ ಚಿಕಿತ್ಸೆ ನೀಡುತ್ತಿದೆಯೇ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು);

ಅ) ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ಮಾಡುವ ವಿಶೇಷ ಪರೀಕ್ಷೆಗಳಿಗೆ ಈ ಕೆಳಕಂಡಂತೆ ದರ ನಿಗಧಿಪಡಿಸಲಾಗಿದೆ.

1. ವಿಕಿರಣ ರೋಗ ವಿಧಾನ ಶಾಸ್ತ್ರ ವಿಭಾಗ (ಸಿ.ಟಿ.ಸ್ಕ್ಯಾನ್)

ಕ್ರ. ಸಂ.	ಸ್ಕ್ಯಾನ್ ಮಾಡುವ ಭಾಗ	ಹೊರಗಿನಿಂದ ರೆಫರ್ ಮಾಡಲಾದ ಕೇಸ್‌ಗಳಿಗೆ	ಆಸ್ಪತ್ರೆಯ ಕೇಸ್‌ಗಳಿಗೆ
		ರೂ.	ರೂ.
1.	ಬ್ರೈನ್: ಶಿರ	800-00	600-00
2.	ಒಂದು ಭಾಗಕ್ಕೆ (ತೊರಾಕ್ಸ್, ಅಬ್ಡುಮನ್ ಪೆಲ್ವಿಸ್)	1000-00	750-00
3.	ಎರಡು ಭಾಗಕ್ಕೆ	2000-00	1200-00
4.	ಪೂರ್ಣ ಶರೀರದ ಸ್ಕ್ಯಾನ್	3000-00	2000-00
5.	ಸಣ್ಣ ಭಾಗಗಳಿಗೆ	500-00	300-00
6.	ಸಿ.ಟಿ. ಗೈಡೆಡ್ ಬಯಾಪ್ಸಿ	-	300-00
7.	ಸಿ.ಟಿ. ಗೈಡೆಡ್ ಸರ್ವೆ ಬ್ಲಾಕ್ ಪ್ರೊಸೀಜರ್ಸ್	-	200-00
8.	ರಿವ್ಯೂ ಆಫ್ ಸಿ.ಟಿ.ಫಿಲಮ್ಸ್	50-00	—
9.	ರಿವ್ಯೂ ಆಫ್ ಎಕ್ಸ್-ರೇ ಫಿಲಮ್ಸ್	20-00	—

2.	ಮೆಮೋಗ್ರಫಿ; ಡಕ್ ಮೆಮೋಗ್ರಫಿ ಲೋಕಲೈಸೇಷನ್ ಮೆಮೋಟ್ರಪಿ (ಪರ್ ಸೈಡ್);	ವಿಶೇಷ ವರ್ಗ	ಸಾಮಾನ್ಯ ವರ್ಗ
		150.00	75.00

3. ಲೇನಿಯರ್ ಅಕ್ಸಿಲರೇಟರ್(ವಿಕಿರಣ ಚಿಕಿತ್ಸೆ ಇಲಾಖೆ)

ಶಾಂತಿಧಾಮ	ವಿಶೇಷ ವಿಭಾಗ	ಸಾಮಾನ್ಯ ವಿಭಾಗ
ರೂ. 7500-00	ರೂ. 5000-00	2,500-00

ಆ) ಹೌದು- ಆದರೆ, ಬಡ ಮತ್ತು ನಿಗದಿತ ದರ ಪಾವತಿ ಮಾಡಲು ಅಸಮರ್ಥರಾದ ರೋಗಿಗಳಿಗೆ ದರ ಪಾವತಿ ಮಾಡುವುದರಿಂದ ವಿನಾಯಿತಿ ನೀಡಲಾಗುತ್ತಿದೆ.

ಇ) ಹೌದು, ಬಡ ರೋಗಿಗಳು ದರ ಪಾವತಿಯಿಂದ ವಿನಾಯಿತಿಯನ್ನು ಪಡೆಯುತ್ತಿದ್ದಾರೆ. ಹಾಗೂ ರೋಗಿಯ ದರ ಪಾವತಿಯ ಸಾಮರ್ಥ್ಯಕ್ಕನುಗುಣವಾಗಿ ರಿಯಾಯಿತಿಯನ್ನು ನೀಡಲಾಗುತ್ತಿದೆ.